ಎಲ್ಲ ಕೆಲಸ ಮುಗಿಸಿ, ಇನ್ನೇನೂ ಗಿರಾಕಿಗಳು ಊಟಕ್ಕೆ ಬರುವ ಹೊತ್ತಾಯ್ತೆಂದು ಮಾದೇವ ಊಟ ನೀಡಲು ತಯಾರಿ ಮಾಡುತ್ತಿದ್ದ. ಧರೆಪ್ಪ ಅವನನ್ನು ಕರೆದ. ಮಾದೇವ ಎದುರಿಗೆ ಹೋಗಿ ನಿಂತಾಗ ಅವನಿಗೆ ಮುಖಕೊಟ್ಟು ಮಾತನಾಡಲು ಆಗಲಿಲ್ಲ. ಯಾವುದೋ ಸಂದಿಗ್ಧ ಸ್ಥಿತಿಯಲ್ಲಿ ಸಿಕ್ಕು ತೊಳಲಾಡುತ್ತಿದ್ದ ಹಾಗೇ ಕಾಣುತ್ತಿದ್ದ. 'ಮಾದ್ಯಾ.. ಜಲ್ದಿ ಎ.ಪಿ.ಎಂ.ಸಿಗೆ ಹೋಗಿ ತರಕಾರಿ ತಗೊಂಡ ಬಾ' ಎಂದ. ಆ ಮಾತಿಗೆ 'ಆಯ್ತು' ಎಂದನಾದರೂ ಪ್ರತಿದಿನ ಸಾಯಂಕಾಲ ಎ.ಪಿ.ಎಂ.ಸಿಗೆ ಹೋಗಿ ಬರುವುದು ಇದೆ. ಕಾಕಾ ಇವತ್ತೇನೂ ಮಧ್ಯಾಹ್ನ ಕಳಿಸುತ್ತಿರುವುದು ಅವನಿಗೆ ಅಜೀಬ ಅನ್ನಿಸಿತು. ಕೈಯಲ್ಲಿ ಚೀಲ ಹಿಡಿದುಕೊಂಡು ಹೊರಟ.

ಮರುದಿನವೂ ಮಧ್ಯಾಹ್ನ ಗಿರಾಕಿಗಳು ಬರುವ ವೇಳೆಯೊಳಗೆ ಏನಾದರೊಂದು ನೆಪ ಮಾಡಿ ಧರೆಪ್ಪ ಮಾದೇವನನ್ನು ಹೊರಗೆ ಕಳಿಸಿ ಬಿಡುತ್ತಿದ್ದ. ಕಾಕಾ ಈ ನಡುವೆ ಯಾಕೋ ವಿಚಿತ್ರವಾಗಿ ಆಡುತ್ತಿರುವುದು ಅವನ ಗಮನಕ್ಕೆ ಬಂದರೂ ಧರೆಪ್ಪನ ಮೇಲಿನ ಕುರುಡು ಪ್ರೀತಿ ಮತ್ತು ಅಭಿಮಾನದ ಮುಂದೆ ಎಲ್ಲವೂ ನಗಣ್ಯವಾಗಿತ್ತು.

ಅವತ್ತು 'ಕಾಲ್ಮಡದು ಬರ್ತಿನಿ' ಎಂದು ಹೇಳಿ ಧರೆಪ್ಪ ಹೊರಗೆ ಹೋದ. ಹಾಗೇ ಹೇಳಿ ಹೋದನೆಂದರೆ ಅವನು ಬರುವತನಕ ಖಾನಾವಳಿಯ ಎಲ್ಲ ಜವಾಬ್ದಾರಿಯನ್ನು ಮೈತುಂಬ ಕಣ್ಣಾಗಿ ಮಾದೇವನೇ ನೋಡಿಕೊಳ್ಳಬೇಕಿತ್ತು. ಸಣ್ಣಪುಟ್ಟ ವ್ಯತ್ಯಾಸವಾದರೂ ಧರೆಪ್ಪ ಸಹಿಸಿಕೊಳ್ಳುತ್ತಿರಲಿಲ್ಲ. ಟೊಂಗೆ ಮುರಿದು ಬೀಳುವುದಕ್ಕೂ ಹಕ್ಕಿ ಹಾರಿ ಹೋಗುವುದಕ್ಕೂ ಸರಿ ಹೋಗಿತ್ತು. ಧರೆಪ್ಪ ಹೋಗುವುದನ್ನೇ ಕಾಯುತ್ತಿದ್ದ ಮಣಿಕಂಠ ಎಲ್ಲಿ ಅಡಗಿ ಕುಳಿತಿದ್ದನೇನೋ? ಏಕಾಏಕಿ ಬಂದು ಗಲ್ಲಾ ಒಳಗಿನ ಹಣವೆಲ್ಲ ಕಿಸೆಯಲ್ಲಿ ತುಂಬಿಕೊಳ್ಳಲಾರಂಭಿಸಿದ. ಅದನ್ನು ನೋಡಿದ ಮಾದೇವ ಗಾಬರಿಯಾಗಿ ಓಡಿ ಬಂದು 'ಕಾಕಾ ಬೈತಾನ ಇಡು ಅಣ್ಣ' ಎಂದು ಅವನ ಕೈ ಹಿಡಿಯುವುದೇ ತಡ ಮಣಿಕಂಠ ಸಿಟ್ಟಿನಲ್ಲಿ 'ಮಗ್ನಾ... ನಮ್ಮ ಖಾನಾವಳಿನ ಒಳಗಿಂದ ರೊಕ್ಕ ನಾ ತಗೊಂಡ್ರ ನಿನಗೇನೋ?' ಎಂದು ಅವನ ಕಪಾಳಕ್ಕೆ ಒಂದು ಏಟು ಕೊಟ್ಟ. ಅಷ್ಟೊತ್ತಿಗೆ ಧರೆಪ್ಪ ಒಳಗೆ ಬಂದ. ಇನ್ನೇನು ಮಣಿಕಂಠನಿಗೆ ಕಾಕಾನಿಂದ ತಕ್ಕ ಶಾಸ್ತಿಯಾಗುವುದೆಂದು ಕಾದಿದ್ದ ಮಾದೇವನಿಗೆ ಧರೆಪ್ಪನ ನಡೆ ಮತ್ತಷ್ಟು ನೋವುಂಟು ಮಾಡಿತು. ಧರೆಪ್ಪ ತನಗೂ ಇದಕ್ಕೂ ಸಂಬಂಧವೇ ಇಲ್ಲದಂತೆ ಹೋಗಿ ಗಲ್ಲಾ ಮೇಲೆ ಕುಳಿತ. ಜಗಳ ಮತ್ತಷ್ಟು ವಿಕೋಪಕ್ಕೆ ಹೋಗುವುದು ಅವನಿಗೆ ಬೇಕಿರಲಿಲ್ಲ. ಡಾಕ್ಟರ್ ಯಾವುದೇ ಕಾರಣಕ್ಕೂ ಉದ್ವೇಗಕ್ಕೆ ಒಳಗಾಗಬೇಡಿ ಎಂಬ ಸಲಹೆಯನ್ನು ಅವನು ಗಂಭೀರವಾಗಿ ತೆಗೆದುಕೊಂಡಿದ್ದ. ಕೆಲಸಗಾರರೆಲ್ಲ ಪಾಪ! ಎನ್ನುವಂತೆ ಮಾದೇವನನ್ನು ನೋಡುತ್ತಿದ್ದರು. ಅವನಿಗೆ ಕೆಲಸ ಮುಂದುವರೆಸಲು ಮನಸ್ಸಾಗಲಿಲ್ಲ. ಹೆಜ್ಜೆಗಳು ಭಾರ ಎನಿಸುತ್ತಿದ್ದವು. ಕಣ್ಣಂಚಿನಲ್ಲಿ ನೀರು ಮನೆಮಾಡಿತ್ತು. ಮುಸುರಿಯಾಗಿದ್ದ ಕೈಯನ್ನು ತೊಳೆದುಕೊಳ್ಳದೆ ಸೀದಾ ಹೊರಗೆ ಬಂದ.

ಧರೆಪ್ಪನಿಗೆ ಆ ಕ್ಷಣ 'ಎಲ್ಲಿ ಹೋಗ್ತನಾ... ಮಗಾ ಬಂದೇ ಬರತಾನ' ಎಂದೆನ್ನಿಸಿದರೂ ಸ್ವಲ್ಪ ಹೊತ್ತು ಬಿಟ್ಟು ಮಾದೇವನ್ನು ಹುಡುಕಿ ಕರೆದುಕೊಂಡು ಬರಲು ಕೆಲಸಗಾರರನ್ನು ಕಳಿಸಿದ. ಬಹಳ ಹೊತ್ತಾದರೂ ಮಾದೇವ ಬರಲಿಲ್ಲ. ಧರೆಪ್ಪನ ಮುಖದಲ್ಲಿ ಚಿಂತೆಯ ಗೆರೆಗಳು ಮೂಡಿದವು.

ಧರೆಪ್ಪ ಕಾಕಾನೇ ಕೈ ಬಿಟ್ಟ ಮೇಲೆ ಇನ್ನು ನನಗಾರು ದಿಕ್ಕು? ಈ ಊರಿನ ಋಣ ಮುಗಿಯಲು ಬಂತೆಂದು ಮಾದೇವ ಮಾನಸಿಕವಾಗಿ ಸಿದ್ಧನಾಗುತ್ತಿದ್ದ. ಇನ್ನೊಂದು ಸಲ ನಾಯಿಯನ್ನು ನೋಡಿ ಹೋದರಾಯಿತೆಂದು ತಂಗುದಾಣದ ಕಡೆಗೆ ಹೆಜ್ಜೆ ಹಾಕಿದ. ನಾಯಿ ಎಲ್ಲಿಯೂ ಕಾಣಲಿಲ್ಲ. ಅವನ ದುಃಖ ದುಪ್ಪಟ್ಟಾಯಿತು. ನಾಯಿಗೆ ಒಯ್ದಿದ್ದ ಬನ್ ಮತ್ತು ಬಿಸ್ಕತ್ತನ್ನು ಅಲ್ಲಿಯೇ ಕಟ್ಟೆಯ ಮೇಲೆ ಇರಿಸಿ ಕೂತ. ಅನಾಥಪ್ರಜ್ಞೆ ಕಾಡುತ್ತಲಿತ್ತು. ಖಾಲಿ ಆಕಾಶವನ್ನು ದಿಟ್ಟಿಸುತ್ತಿದ್ದ. ಇನ್ನೇನು ಎದ್ದು ಹೊರಡಬೇಕೆಂದವನಿಗೆ ರಸ್ತೆಯ ತಿರುವಿನಲ್ಲಿ ಕಪ್ಪನೆಯ ನಾಯಿ ಮರಿಯೊಂದು ತನ್ನ ಮುಂಗಾಲನ್ನು ಎತ್ತಿ ಮುಖವನ್ನು ಒರೆಯಿಸಿಕೊಳ್ಳುತ್ತಿತ್ತು. ಕುತೂಹಲದಲ್ಲಿ ಹತ್ತಿರ ಹೋಗಿ ನೋಡಿದ. ಕಂಟಿ ಮರೆಯಲ್ಲಿ ಐದಾರು ಪುಟ್ಟ ಪುಟ್ಟ ನಾಯಿ ಮರಿಗಳು ನಾ ಮುಂದು ತಾ ಮುಂದು ಎಂದು ಮುಗಿಬಿದ್ದು ದೊಡ್ಡ ನಾಯಿಯ ಮೊಲೆಹಾಲನ್ನು ಕುಡಿಯುತ್ತಿದ್ದವು. ಮಾದೇನನ್ನು ಕಂಡದ್ದೇ ತಡ ದೊಡ್ಡ ನಾಯಿ ಬಾಲ ಅಲ್ಲಾಡಿಸುತ್ತ ಹೊರಗೆ ಬಂದು ಅವನ ಮೈಮೇಲೆ ಜಿಗಿದಾಡಿತು. ತನ್ನ ಪುಟ್ಟ ಪ್ರಪಂಚ ಮತ್ತಷ್ಟು ವಿಸ್ತಾರವಾದ ಭಾವ ಅವನೊಳಗೆ ಮೂಡಿ ಅವನ ಕಣ್ಣಲ್ಲಿ ಆನಂದಭಾಷ್ಪ